# 22ನೇ ಕಾನೂನು ಆಯೋಗ ರಚನೆಗೆ ಕೇದ್ರ ಸಂಪುಟ ಅಸ್ತು

ವಿಶ್ವವಾಣಿ 20/2/2020

**ದೆಹಲಿ:** ಮೂರು ವರ್ಷಗಳ ಅವಧಿಯ 22ನೇ ಕಾನೂನು ಆಯೋಗ ರಚನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.



ಕಾನೂನು ಕುರಿತ. ವಿವಿಧ ಆಯಾಮಗಳ ಮೇಲಿನ ತಜ್ಞರ ಸಮಿತಿ ನೀಡುವ ಶಿಫಾರಸುಗಳ ಪ್ರಯೋಜನವನ್ನು ಸರಕಾರ ಪಡೆಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆ ನಂತರ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಸುದ್ದಿಗಾರರಿಗೆ ತಿಳಿಸಿದರು.

ಕಾನೂನು ಆಯೋಗವು ಕಾನೂನಿನಲ್ಲಿ ಸಂಶೋಧನೆ ಕೈಗೊಳ್ಳುವುದಲ್ಲದೇ, ಸದ್ಯ ಜಾರಿಯಲ್ಲಿರುವ ಕಾನೂನುಗಳನ್ನು ಪರಿಶೀಲಿಸಲಿದೆ. ಇವುಗಳಿಗೆ ಸುಧಾರಣೆಗಳು ಮತ್ತು ಶಾಸನಗಳನ್ನು ಸೂಚಿಸಲಿದೆ.

ನ್ಯಾಯಾಲಯಗಳಲ್ಲಿ ಪ್ರಕರಣಗಳ ತ್ವರಿತ ವಿಲೇವಾರಿಗೆ ಮತ್ತು ಕಕ್ಷಿದಾರರಿಗೆ ವೆಚ್ಚ ತಗ್ಗಿಸುವಲ್ಲಿ ಸುಧಾರಣೆ ತರಲು ಅಧ್ಯಯನ ಮತ್ತು ಸಂಶೋಧನೆಗಳನ್ನು ಆಯೋಗ ಕೈಗೆತ್ತಿಕೊಳ್ಳಲಿದೆ.

ಅಧಿಕೃತ ಗೆಜೆಟ್‌ನಲ್ಲಿ ತನ್ನ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ 22ನೇ ಕಾನೂನು ಆಯೋಗ ಕಾರ್ಯನಿರ್ವಹಿಸಲಿದೆ. ಆಯೋಗದಲ್ಲಿ ನಾಲ್ವರು ಪೂರ್ಣಾವಧಿ ಸದಸ್ಯರು ಸೇರಿದಂತೆ ಕಾನೂನು ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಮತ್ತು ಶಾಸಕಾಂಗ ಇಲಾಖೆಯ ಕಾರ್ಯದರ್ಶಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಾರೆ.

## 2ನೇ ಹಂತದ ಸ್ವಚ್ಛ ಭಾರತ್‌ಗೆ ಕೇಂದ್ರ ಒಪ್ಪಿಗೆ

**2024-25ರವರೆಗೆ 2ನೇ ಹಂತದ ಸ್ವಚ್ಛ ಭಾರತ್ ಕಾರ್ಯಕ್ರಮ(ಗ್ರಾಮೀಣ)ಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಬಯಲು ಶೌಚ ಮುಕ್ತಗೊಳಿಸುವಲ್ಲಿ ಸುಸ್ಥಿರತೆ ಮತ್ತು ಘನ-ದ್ರವ ತ್ಯಾಜ್ಯ ನಿರ್ವಹಣೆಗೆ ಕಾರ್ಯಕ್ರಮ ಒತ್ತು ನೀಡಲಿದೆ. ಶೌಚಾಲಯದಿಂದ ಯಾರೊಬ್ಬರೂ ವಂಚಿತರಾಗದಂತೆ ಪ್ರತಿಯೊಬ್ಬರೂ ಶೌಚಾಲಯವನ್ನು ಬಳಸುವಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಕಾರ್ಯನಿರ್ವಹಿಸಲಿದೆ. 2020-21 ರಿಂದ 2024-25ರವರೆಗಿನ ಈ ಕಾರ್ಯಕ್ರಮಕ್ಕೆ ಕೇಂದ್ರ ಮತ್ತು ರಾಜ್ಯಗಳ ಪಾಲು ಸೇರಿದಂತೆ ಅಂದಾಜು ಒಟ್ಟು 52, 497 ಕೋಟಿ ರು. ಒದಗಿಸಲಾಗಿದೆ ಎಂದು ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.**